ಬಾಕಿಯಿತ್ತು. ಅಲಾರ್ಮನ್ನು ಆಫ್ ಮಾಡಿದ. ಅದೇ ನೆನಪು ಬೇರೆ ಬೇರೆ ರೀತಿಯಲ್ಲಿ ಕನಸಾಗಿ ಬರುತ್ತಿದೆ ಎಂದುಕೊಂಡು ಸಿಟ್ಟಿನಲ್ಲಿ ಎದ್ದು ಕೂತ. ಕುತ್ತಿಗೆ ನೋಯುತ್ತಿತ್ತು. ತಲೆಯ ಮೇಲೆ ಯಾರೋ ಎಪಿಎಂಸಿ ಯಾರ್ಡಿನ ತರಕಾರಿ ಮೂಟೆಯನ್ನು ಇಟ್ಟಂತೆ ವಿಪರೀತ ನೋವು. ಹಾಗೇ ಕುತ್ತಿಗೆ ಉಜ್ಜಿಕೊಳ್ಳುತ್ತಾ ನಡೆದುಕೊಂಡು ಹೊರಗೆ ಬಂದ. ಮೆಟ್ಟಿಲಿಳಿದು ಕೆಳಕ್ಕೆ ಬಂದರೆ ಪಂದ್ಯ ಮುಗಿದ ನಂತರ ಖಾಲಿಯಾದ ಕ್ರೀಡಾಂಗಣದಂತೆ ಎಲ್ಲೆಲ್ಲೂ ಹಿಂದಿನ ದಿನದ ಫೇರ್‌ವೆಲ್‌ನ ಆಚರಣೆಯ ಕೇಕ್ ಪೀಸು, ಬಣ್ಣದ ಕಾಗದಗಳು, ಚೇರುಗಳು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದವು. ಗೋಡೆಗೆ ಅಂಟಿಸಿದ ಫೇರ್‌ವೆಲ್ ಬೋರ್ಡು ಏಕಾಂಗಿಯಾಗಿ ನಿಂತಿತ್ತು. ಅದರತ್ತ ನೋಡಲೆಂದು ತಲೆ ಎತ್ತಿದರೆ ಮತ್ತೆ ಅಸಾಧ್ಯ ನೋವು. ಹಾಗೇ ಸ್ಟೋರ್ ರೂಮಿಗೆ ಹೋಗಿ ಕಾಯಿಮೊಟ್ಟೆಗಳನ್ನು ಬುಟ್ಟಿಗೆ ಹಾಕಿಕೊಂಡು ಒಲೆಗೆ ತುಂಬಿ ಬೆಂಕಿ ಹಚ್ಚಿದ ಸಂದೀಪನಿಗೆ ಬದಿಯಲ್ಲೆಲ್ಲೋ ಮಿಯಾಂವ್ ಎಂದಂತೆ ಕೇಳಿಸಿತು. ಸುತ್ತಮುತ್ತ ನೋಡಿದ, ಎಲ್ಲೂ ಬೆಕ್ಕು ಕಾಣಿಸಲಿಲ್ಲ. ಆದರೆ ಮಿಯಾಂವ್ ಸದ್ದು ಮಾತ್ರ ಕೇಳಿಸುತ್ತಿದೆ. ತೀರಾ ಹತ್ತಿರದಲ್ಲೇ ಎಲ್ಲಿಂದಲೋ ಸದ್ದು ಬರುತ್ತಿದೆ. ಎಲ್ಲೋ ಮೇಲಿಂದ ಬಂದಂತೆ? ಸಂದೀಪ ನಿಧಾನಕ್ಕೆ ಮೊದಲ ಬಾತ್‌ರೂಮಿನಲ್ಲಿದ್ದ ಕನ್ನಡಿಯ ಎದುರು ಹೋಗಿ ನಿಂತ. ಕರಿ ಬೆಕ್ಕು ಸರಿಯಾಗಿ ಸಂದೀಪನ ಕುತ್ತಿಗೆಯ ಮೇಲೆಯೇ ಕೂತಿತ್ತು! ಅದರ ಬಿಂಬ ಇವನತ್ತ ನೋಡಿ ಮಿಯಾಂವ್ ಎಂದಿತು! ಸಂದೀಪನ ಗಂಟಲಿನಿಂದ ಹೊರಟ ಚೀತ್ಕಾರವೊಂದು ಬಾಯಿಯಿಂದ ಹೊರಗೆ ಬರಲಿಲ್ಲ.

'ನಂದೂ ಮಾರ್ಕ್ಸ್ ಕಾರ್ಡ್ ಕಳ್ದು ಹೋಗಿದೆ ಅಣ್ಣಾ, ನಾನೂ ಬರ್‍ತೀನಿ' ಎನ್ನುತ್ತಾ ಅರಿಹಂತನ ಜೊತೆಗೆ ಕಡೂರಿನಿಂದ ರೈಲು ಹತ್ತಿದ ಸಂದೀಪನ ಜೊತೆ ಅರಿಹಂತ ಬೆಳಗಾವಿ ತಲುಪಿ ಯುನಿವರ್ಸಿಟಿಗೆ ಹೋಗಿ, ಅಲ್ಲಿ ಪರಿಪರಿಯಾಗಿ ತನ್ನ ಪರಿಸ್ಥಿತಿ ವಿವರಿಸಿ ಅರ್ಜಿ ಬರೆದು ಕೊಟ್ಟು ಮತ್ತೊಂದು ಕಾಪಿ ಒರಿಜಿನಲ್ ಅಂಕಪಟ್ಟಿಯನ್ನು ಕೊನೆಗೂ ಪಡೆದುಕೊಳ್ಳುವವರೆಗೆ ಏನೂ ಮಾತನಾಡಿರಲಿಲ್ಲ. ವಾಪಸ್ ರೈಲು ಹತ್ತಿದಾಗ 'ನಿಂಗೇನ್ ಅರ್ಜೆಂಟ್ ಇರ್‍ಲಿಲ್ವಲ್ಲೋ, ಅಲ್ಲಿಂದಾನೇ ಅಪ್ಲಿಕೇಷನ್ ಹಾಕ್ಬೋದಿತ್ತಲ್ಲ' ಎಂದು ಕೇಳಿದ. ಅದಕ್ಕೆ



ಸಂದೀಪ ಹೂಂ ಎಂದಷ್ಟೇ ಪ್ರತ್ಯುತ್ತರಿಸಿದ. ಅರಿಹಂತ ಅಂಕಪಟ್ಟಿ ಹಿಡಿದು ಯುನಿವರ್ಸಿಟಿಯ ಹೊರಗೆ ಬಂದು ಸಮಾಧಾನದ ನಗು ಬೀರಿದಾಗಿನಿಂದ ಸಂದೀಪನಿಗೆ ಕುತ್ತಿಗೆ ನೋವು ಕಡಿಮೆಯಾಗಿತ್ತು. ರೈಲು ಹೊರಟಾಗ ಪ್ಲಾಟ್‌ಫಾರಂ ಕಡೆಗೆ ಕಣ್ಣು ಹಾಯಿಸಿದವನಿಗೆ ಕರಿ ಬೆಕ್ಕು ನಿಲ್ದಾಣದಿಂದ ಹೊರಹೋಗುತ್ತಿರುವುದು ಕಾಣಿಸಿತು. ಆ ಕ್ಷಣದಲ್ಲಿ ನಡೆದದ್ದನ್ನೆಲ್ಲಾ ತಾನು ಹೇಳಿದರೆ ಅರಿಹಂತ ಕ್ಷಮಿಸಬಹುದೇನೋ ಎನ್ನಿಸಿತು. ನೀವು ಅಷ್ಟೊಂದು ಸ್ಟ್ರಿಕ್ಟ್ ಆಗಿ ಇರ್ದೇ ಇದ್ದಿದ್ರೆ ನಾನ್ ಈ ಥರ ಮಾಡ್ತಿರ್‍ಲಿಲ್ಲ ಎಂದು ಹೇಳಿದರೆ ಅವನಿಗೆ ಅರ್ಥವಾಗುತ್ತದೆ ಎನ್ನಿಸಿತು. ಅವನತ್ತ ತಿರುಗಿ 'ಅಣ್ಣಾ' ಎಂದು ಕರೆದ. ಅರಿಹಂತ ಅವನತ್ತ ನೋಡಿ, 'ಇನ್ಮೇಲಿಂದ ಅಣ್ಣ ಗಿಣ್ಣ ಅಂತೆಲ್ಲಾ ಕರಿಯೋದ್ ಬೇಡ, ಫಸ್ಟ್ ಇಯರ್ ಮುಗೀತಲ್ಲ, ಇವಾಗ್ ನೀನೂ ಸೀನಿಯರ್ರು, ಜ್ಯೂನಿಯರ್ಸ್‌ನ್ನ ಹೆಂಗ್ ಕಂಟ್ರೋಲಲ್ಲಿ ಇಟ್ಕಂಬೇಕು ಅಂತ ಗೊತ್ತಲ್ಲ' ಎಂದ. ಗೊಂದಲಗೊಂಡ ಸಂದೀಪನಿಗೆ ಬದಿಯಲ್ಲೆಲ್ಲೋ ಮಿಯಾಂವ್ ಎಂಬ ಸದ್ದು ಕೇಳಿಸಿತು.

●